ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು) : ಅಧ್ಯಕ್ಷರೇ, ಆ ರಸ್ತೆಯಲ್ಲೇ ನಾನು ಆಡ್ಡಾಡುವುದು. ನನಗೂ ಸಂಬಂಧವಿರುವ ರಸ್ತೆ ಅದು. ಆ ರೋಡ್‌ದ್ದು ಅವರು ಹೇಳಿದಂಥ ಪರಿಸ್ಥಿತಿಯಿಲ್ಲ. ಅಲ್ಲಿ ರಸ್ತೆ ಆಗಲ ಮಾಡುವ ಕೆಲಸ ನಡೆದಿದೆ. ಆಗ ಕೆದರಿದೆ, ಕೆಲಸವೂ ನಡೆದಿದೆ.

ಶ್ರೀ ಮಂಜುನಾಥ .ಸಿ ಕುನ್ನೂರು : ದಯವಿಟ್ಟು ಒಂದು ತನಿಖೆ ಮಾಡಿಸಿ, ತಪ್ಪು ಮಾಹಿತಿ ಸದನಕ್ಕೆ ಕೊಡಬಾರದು.

ಅಧ್ಯಕ್ಷರು : ನನಗೆ ಗೊತ್ತಾಗುತ್ತದೆ, ನೀವು ಅವರು ಹೇಳುವುದರ ಮಧ್ಯೆ ಎಲ್ಲೋ ಸತ್ಯ ಅಡಗಿದೆ, ನಾನು ಹುಡುಕಿಸುತ್ತೇನೆ ಬಿಡಿ.

ಬಳ್ಳಾರಿಯ ಜೋಳದ ರಾಶಿಯಿಂದ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಪ್ರಾರಂಭ

120 (303) ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಬಳ್ಳಾರಿಯ ಜೋಳದ ರಾಶಿಯಿಂದ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆಯೇ.

(ಆ) ಇಲ್ಲದಿದ್ದಲ್ಲಿ, ಯಾವಾಗ ಪ್ರಾರಂಭಸಲಾಗುವುದು ?

(ಇ) ಇದಕ್ಕಾಗಿ ಕೇಂದ್ರ ಸರ್ಕಾರದಿಂದ ಬಂದ ಹಣವೆಷ್ಟು

ಶ್ರೀ ಉಮೇಶ್ ವಿ.ಕತ್ತಿ (ಲೋಕೋಪಯೋಗಿ ಸಚಿವರು):

ಅ) ಇನ್ನೂ ಪ್ರಾರಂಭಿಸಿರುವುದಿಲ್ಲ

ಆ) 1999ರ ಮೇ ತಿಂಗಳಲ್ಲಿ ಪ್ರಾರಂಭಿಸುವ ಸಾಧ್ಯತೆ ಇದೆ.

ಇ) ರಾಷ್ಟ್ರೀಯ ಹೆದ್ದಾರಿ ಸಂಖ್ಯೆ - 63ರ ಕಿ.ಮೀ. 358 ರಿಂದ 370.60ರವರೆಗೆ ಹಾಲಿ ಇರುವ ರಸ್ತೆಯನ್ನು ಅಗಲಗೊಳಿಸುವ ಸಲುವಾಗಿ, ರೂ. 432.54 ಲಕ್ಷಗಳಿಗೆ ಅಂದಾಜುಮಂಜೂರಾಗಿದೆ.

ಶ್ರೀ ಅಲ್ಲಂ ವೀರಭದ್ರಪ್ಪ : ಅಧ್ಯಕ್ಷರೇ, ಈ ಹೆದ್ದಾರಿಯನ್ನು ಎರಡನೇ ಸಲ ಸರ್ಕಾರ ತೆಗೆದುಕೊಳ್ಳುತ್ತಿದೆ. ಮೊದಲನೇ ಸಲ ಸಿರ್ಸಿ ಹುಬ್ಬಳ್ಳಿ ಬಳ್ಳಾರಿ ಎಂದು ಪ್ರಾರಂಭಿಸಿದಾಗ ನಾವು ಬಳ್ಳಾರಿ ಜನ ಬಹಳ ಸಂತೋಷಪಟ್ಟೆವು. ಈ ಬಳ್ಳಾರಿ ರೋಡು ಹೆದ್ದಾರಿಯಾಗುತ್ತದೆ ಎಂದು ಆದರೆ ಶಿರಸಿ-ಹುಬ್ಬಳ್ಳಿ ಮಾಡಿ ಮುಗಿಸಿಬಿಟ್ಟರು. ಆದಕಾರಣ ಈ ಸಾರಿ ಕೂಡ ಜೋಳದರಾಶಿ ಎಂದರೆ ನನ್ನ ಕ್ಷೇತ್ರದಲ್ಲಿ ಪ್ರಾರಂಭವಾಗುತ್ತದೆ. ಹುಬ್ಬಳ್ಳಿ ಹೆದ್ದಾರಿಯಾಗಿದೆ. ಹೆದ್ದಾರಿಯನ್ನು ಹುಬ್ಬಳ್ಳಿಯಿಂದ ಪ್ರಾರಂಭಮಾಡಿದರೆ ನಮಗೇನೂ ಸಿಗುವುದಿಲ್ಲ. ಆದಕಾರಣ ಬಳ್ಳಾರಿಯಿಂದ ಪ್ರಾರಂಭಮಾಡಬೇಕೆಂದು ಕೇಳುತ್ತಿದ್ದೇವೆ. ಉತ್ತರದಲ್ಲಿ ಇವತ್ತು ಬರೀ 12 ಕಿಲೋಮಿಟರ್ ನಾವು ಮಾಡುತ್ತೇವೆ ಎಂದು ಕೊಟ್ಟಿದ್ದಾರೆ. ಇದು ಕನಿಷ್ಟಪಕ್ಷ ಬಳ್ಳಾರಿ ಜಿಲ್ಲೆಯಿಂದ 70 ರಿಂದ 80 ಕಿಲೋಮಿಟರ್ ಆಗುತ್ತದೆ. ಇವತ್ತು ಬಳ್ಳಾರಿ ಜಿಲ್ಲೆಯಲ್ಲಿ ಮಹತ್ವವಾದ ಇಂಡಸ್ಟ್ರೀಗಳು ಬರುತ್ತಿವೆ. ಜಿಂದಾಲ್ ಬರುತ್ತಿದೆ. ಆಮೇಲೆ ಬಿ.ಎಸ್.ಐ.ಎಲ್ ಇದೆ. ನವಕರ್ನಾಟಕ ಇದೆ. ಇವೆಲ್ಲಾ ಕೂಡ ಕವರ್

ಆಗುತ್ತವೆ. ಬಹಳಷ್ಟು ವಾಹನಗಳು ಇದ್ದಾವೆ. ಇದಕ್ಕೆ ಮಹತ್ವವನ್ನು ಕೊಡಬೇಕು ಯಾವ ಊರಿನಲ್ಲಿ ಕೊಟ್ಟರೆ ಏನಾಗುತ್ತದೆ ಎಂದು ಮಾಡುವ ಕಾಲಕ್ಕೆ ಮಹತ್ವವನ್ನು ಮೆರಿಟ್ ಮೇಲೆಕೊಟ್ಟರೆ ಇದಕ್ಕೆ 70 ಕಿಲೋಮಿಾಟರ್‌ನ್ನು ಮೊಟ್ಟ ಮೊದಲನೆಯದಾಗಿ ಪ್ರಾರಂಭ ಮಾಡಬೇಕೆಂದು ತಮ್ಮ ಮೂಲಕ ಸಚಿವರಲ್ಲಿ ಕೇಳುತ್ತಿದ್ದೇವೆ.

ಶ್ರೀ ಉಮೇಶ್ ವಿ.ಕತ್ತಿ : ಮಾನ್ಯ ಅಧ್ಯಕ್ಷರೇ, ಈ ರಸ್ತೆ ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತನೆಗೊಂಡ ಮೇಲೆ ಇದಕ್ಕೆ 432 ಲಕ್ಷ ರೂಪಾಯಿಗಳ ಅಂದಾಜು ವೆಚ್ಚ 12 ಕಿಲೋಮಿಾಟರ್‌ಗೆ ಆಗಿದೆ. ಇವರು ಹೇಳಿದಂತೆ 70 ಕಿಲೋಮಿಾಟರ್ ಮಾಡಬೇಕಾಗಿರುವುದು ನಿಜ. ಹಂತ ಹಂತವಾಗಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಕೇಂದ್ರಸರ್ಕಾರದಿಂದ ಬರುವ ಅನುದಾನವನ್ನು ನೋಡಿ ಸೀಮಿತಕ್ಕೊಳಪಟ್ಟು ನಾವು ಕೆಲಸ ಮಾಡಬೇಕಾಗಿದೆ. ತಾವು ಹೇಳಿದಂತೆ ಈ ರಸ್ತೆಯು ಬಹಳ ಟ್ರಾಫಿಕ್ ಇರುವುದು ನಿಜ ಕೇಂದ್ರಸರ್ಕಾರದಿಂದ ಇನ್ನು ಹೆಚ್ಚಿನ ಅನುದಾನವನ್ನು ತರಲು ಪ್ರಯತ್ನ ಮಾಡಿ ಎಷ್ಟು ಸಾಧ್ಯವೋ ಅಷ್ಟು ಕೆಲಸವನ್ನು ಮಾಡುತ್ತೇವೆ ಏಕೆಂದರೆ ಒಮ್ಮೆಗೆ 70 ಕಿಲೋಮಿಾಟರ್‌ನ್ನು ತೆಗೆದುಕೊಂಡರೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕಾಗಿ ಹಂತ ಹಂತವಾಗಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆಂದು ತಮ್ಮ ಮುಖಾಂತರ ಹೇಳುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ : ಮಾನ್ಯ ಅಧ್ಯಕ್ಷರೇ, ಈಗ ಡಿಸ್ಟ್ರಿಬ್ಯೂಟ್ ಮಾಡಲಿ. ಹುಬ್ಬಳ್ಳಿಯಲ್ಲಿ ಎಷ್ಟು ತೆಗೆದುಕೊಳ್ಳುತ್ತಾರೋ ಅಷ್ಟೇ ಬಳ್ಳಾರಿಯಿಂದ ತೆಗೆದುಕೊಂಡರೆ ಸರಿಯಾಗುತ್ತದೆ. ಅಲ್ಲಿ ಮೇಜರ್ ಶೇರ್ ಕೊಟ್ಟು ಇಲ್ಲಿಗೆ ಕಡಿಮೆ ಕೊಟ್ಟರೆ ಹೇಗೆ ? ಅಲ್ಲಿ 10 ಕಿಲೋಮಿಾಟರ್ ತೆಗೆದುಕೊಂಡರೆ ಇಲ್ಲಿಯೂ 10 ಕಿಲೋಮಿಾಟರ್‌ನ್ನು ತೆಗೆದುಕೊಳ್ಳಲಿ. ಅಲ್ಲಿ 50 ಕಿಲೋಮಿಾಟರ್ ತೆಗೆದುಕೊಂಡರೆ ಇಲ್ಲಿಯೂ ಕೂಡ 50 ಕಿಲೋಮಿಾಟರ್‌ನ್ನು ತೆಗೆದುಕೊಳ್ಳಲಿ. ಇದನ್ನು ಸರಿಸಮಾನವಾಗಿ ವಿತರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಉಮೇಶ್ ವಿ.ಕತ್ತಿ : ಮಾನ್ಯ ಅಧ್ಯಕ್ಷರೇ, ಒಂದು ರಾಷ್ಟ್ರೀಯ ಹೆದ್ದಾರಿಯ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾದರೆ ನಾವೊಂದು ಎಸ್ಟಿಮೇಟ್ ಮಾಡಿ ಸಬ್‌ಮಿಟ್ ಮಾಡಿ ಕೇಂದ್ರ ಸರ್ಕಾರದವರು ಯಾವ ದಿಸೆಯಲ್ಲಿ ಅವರು ಮಂಜೂರಾತಿಯನ್ನು ಕೊಡುತ್ತಾರೆ ಅಷ್ಟಕ್ಕೆ ನಾವು ಕೆಲಸ ಮಾಡುವಂಥ ಕಾರ್ಯಕ್ರಮವಿರುವುದರಿಂದ ಆ ಭಾಗ, ಈ ಭಾಗ ಎನ್ನುವುದಕ್ಕೆ ಬರುವುದಿಲ್ಲ. ಪೂರ್ತಿಯಾಗಿ ಈ ರಸ್ತೆಯನ್ನು ಸರಿಮಾಡುವಲ್ಲಿ ಸರ್ಕಾರ ಪ್ರಯತ್ನ ಮಾಡುತ್ತದೆ ಎಂದು ಹೇಳುತ್ತೇನೆ.

ಗೋಣಿಕೊಪ್ಪ ನಗರಕ್ಕೆ ಬೈಪಾಸ್

121 (1011) ಶ್ರೀ ಹೆಚ್.ಡಿ.ಬಸವರಾಜು (ವಿರಾಜಪೇಟೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಬಾರ್ಡ್ ಮತಿಯಿಂದ ಪಡೆದ ಅನುದಾನದಲ್ಲಿ ಬರಪೊಳ್ಳಗೆ ಅಡ್ಡಲಾಗಿ ನಿರ್ಮಿಸುವ ಸೇತುವೆ ಕಾಮಗಾರಿಗೆ ಅರಣ್ಯ ಇಲಾಖೆಯವರು ಅಡ್ಡಿಪಡಿಸುತ್ತಿರುವುದು ಸರ್ಕಾರದಗಮನಕ್ಕೆ ಬಂದಿದೆಯೇ. ಹಾಗಿದ್ದಲ್ಲಿ ಇದನ್ನು ನಿವಾರಿಸುವ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡ ಕ್ರಮವೇನು ?

ಆ) ಗೋಣಿಕೊಪ್ಪ ನಗರಕ್ಕೆ ಬೈಪಾಸ್ ರಸ್ತೆ ನಿರ್ಮಿಸಲು ಸರ್ಕಾರದವರು ಮಾಡುತ್ತಿರುವ ವಿಳಂಬಕ್ಕೆ ಕಾರಣಗಳೇನು. ಯಾವಾಗ ಇದನ್ನು ನಿರ್ಮಿಸಲು ಕ್ರಮಕೈಗೊಳ್ಳ ಲಾಗುವುದು.